## ಅಸಲು ದಾವಾ ಸಂಖ್ಯೆಃ 426/2008 ಡಿ.ಡಬ್ಲ್ಯೂ-4

ದಿನಾಂಕಃ 14.12.2022 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

## ಪಾಟೀಸವಾಲುಃ ವಾದಿ ಪರ ಶ್ರೀ ಎ.ಎಸ್. ವಕೀಲರಿಂದಃ

ನಾನು ಬಿಎ ಪದವೀಧರಳಾಗಿರುತ್ತೇನೆ. ನಾನು ಯಲಹಂಕದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿಯಾಗಿ ಕರ್ತವ್ಯ ನಿರ್ವಹಿಸಿ ಕಳೆದ ಏಪ್ರಿಲ್ ತಿಂಗಳಿನಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು ಸರ್ಕಾರಿ ಸೇವೆಯಲ್ಲಿರುವಾಗಲೇ ಈ ದಾವಾ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿ. ಸರ್ಕಾರಿ ಸೇವೆಯಲ್ಲಿರುವಾಗ ಆಸ್ತಿಯನ್ನು ಖರೀದಿಸಬೇಕಾದರೆ ತಮ್ಮ ಇಲಾಖೆಯ ಅನುಮತಿ ಪಡೆಯಬೇಕು ಎಂದರೆ ಸರಿ. ನಾನು ನಮ್ಮ ಇಲಾಖೆಯಿಂದ ಅನುಮತಿ ಪಡೆಯದೆ ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು ನೆಲಮಂಗಲದ ನನ್ನ ವಕೀಲರ ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ವಾದಿಗಳ ದಾವೆ ಸುಳ್ಳಿನಿಂದ ಕೂಡಿದೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು ಅದಕ್ಕೆ ಪೂರಕವಾಗಿ ಪಹಣಿ ಮುಟೇಶ್ ಮತ್ತು ಇತರ ದಾಖಲೆಗಳನ್ನು ನೀಡಿರುತ್ತೇನೆ. ಸಾಕ್ಷಿಗೆ ಪುನಃ ವಾದಿಗಳ ದಾವೆ ಸುಳ್ಳಿನಿಂದ ಕೂಡಿದೆ ಎಂದು ತಿಳಿಸಲು ದಾಖಲೆಗಳು ಇವೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಾದಿಗಳು ಕರಾರಿನಂತೆ ಅವರಿಗೆ ಕ್ರಯ ಪತ್ರ ಮಾಡಿಕೊಡುವಂತೆ ಕೋರಿರುವುದು ಕ್ರಮಬದ್ಧವಾಗಿದೆ ಎಂದರೆ ಸರಿಯಲ್ಲ . ನಾನು ಈ ದಾವೆಯಲ್ಲಿ ಪ್ರತ್ಯೇಕ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಜಂಟಿಯಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ನಾನು, 3 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ವಾರಸುದಾರರು ಸೇರಿ ಒಟ್ಟಿಗೆ ಈ ದಾವೆಯನ್ನು ನಡೆಸುತ್ತಿದ್ದೇವೆ ಎಂದರೆ ಸರಿ. ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ವ್ಯವಸಾಯಗಾರರಲ್ಲ, ನನ್ನ ತಂದೆ ವ್ಯವಸಾಯಗಾರರಾಗಿರುತ್ತಾರೆ. ದಿನಾಂಕಃ 05.07.2005 ರಲ್ಲಿ ದಾವಾ ಆಸ್ತಿಯು ನನ್ನ ತಂಗಿ 3 ನೇ ಪ್ರತಿವಾದಿಗೆ

ಕರಾರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯು ನಿಪಿ-18 ರಂತೆ ವಾದಿಗಳಿಗೆ ಕ್ರಯದ ಕರಾರು ಪತ್ರ ಬರೆದು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರಿನ ವಿಚಾರ ನನಗೆ ಯಾವುದೇ ಮಾಹಿತಿ ಇಲ್ಲ ಎಂರದೆ ಸರಿ. ವಾದಿಗಳು ನನಗೆ ಪರಿಚಯ ಇರುವುದಿಲ್ಲ. ವಾದಿಗಳು ನನಗೆ ಗೊತ್ತಿಲ್ಲ ಎಂದು ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ತಿಳಿಸುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ 11.05.2005 ರಲ್ಲಿ ದಾವಾ ಸ್ವತ್ತು ವಾದಿಗಳಿಗೆ ಕರಾರು ಪತ್ರವಾಗಿರುವ ವಿಚಾರ ನಾನು ದಾವಾ ಆಸ್ತಿಯನ್ನು ಖರೀದಿಸುವ ಸಮಯಕ್ಕೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಮತ್ತು ನನ್ನ ತಂಗಿ 3 ನೇ ಪ್ರತಿವಾದಿ ಒಟ್ಟಿಗೆ ಸಂಜೆವಾಣಿ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದುರಿಂದ ಅವರ ಪರಿಚಯವಿರುತ್ತದೆ. ನಾನು ದಾವಾ ಆಸ್ತಿಯನ್ನು ಖರೀದಿಸುವ ಮುಂಚೆ 2 ನೇ ಪ್ರತಿವಾದಿಯ ಬಗ್ಗೆ ನನ್ನ ತಂಗಿ 3 ನೇ ಪ್ರತಿವಾದಿಯಿಂದ ಕೇಳ್ಪಟ್ಟಿದ್ದೆ , ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಪರಿಚಯವಾಗಿರುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿಸುವ ಮೊದಲು 2 ನೇ ಪ್ರತಿವಾದಿಯನ್ನು ನೋಡಿರುವುದಿಲ್ಲ ಎಂದರೆ ಸರಿ. ನನ್ನ ತಂಗಿ 3 ನೇ ಪ್ರತಿವಾದಿಯು ಸಂಜೆವಾಣಿ ಪತ್ರಿಕೆಯ ವರದಿಗಾರರಾಗಿರುತ್ತಾರೆ. ನನ್ನ ತಂಗಿ ಪತ್ರಿಕಾ ವರದಿಗಾರರು ಎಂದು ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ 2 ಮತ್ತು 3 ನೇ ಪ್ರತಿವಾದಿಗಳ ನಡುವೆ ಪತ್ರಿಕೆಯಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಬೇರೆ ಸಂಬಂಧ ಇತ್ತ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ 3 ನೇ ಪ್ರತಿವಾದಿಯನ್ನು ಸಾಕ್ಷಿ ಮಾಡಿಸಿಸುತ್ತೀರಾ ಎಂಬ ಪ್ರಶ್ನೆಗೆ ನಾನು ಮತ್ತು 3 ನೇ ಪ್ರತಿವಾದಿಯು ಅಕ್ಕ-ತಂಗಿಯಾಗಿದ್ದು ಅವರಿಗೆ ಬಿಡುವಿಲ್ಲದ ಕಾರಣ ನಾನೇ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ವಾದಿಗಳಿಗೆ ಆಗಿರುವ ಕರಾರು ಬಯಲಾಗುತ್ತದೆ ಎಂಬ ಕಾರಣದಿಂದ 3 ನೇ ಪ್ರತಿವಾದಿಯನ್ನು ಸಾಕ್ಷಿ ವಿಚಾರಣೆಯನ್ನಾಗಿ ಮಾಡಿಸುತ್ತಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಆರೋಗ್ಯವಾಗಿದ್ದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸರಿ.

ದಾವಾ ಆಸ್ತಿಯನ್ನು ನೀವು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನೋಡಿದ್ದೇನೆ ಮತ್ತು ಅಲ್ಲಿಯೇ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. ನಾನು

ಖರೀದಿಸಿರುವ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ದಿವ್ಯರವರ ಆಸ್ತಿ, ಪಶ್ಚಿಮಕ್ಕೆ ರಾಜಮ್ಮರವರ ಆಸ್ತಿ , ಉತ್ತರಕ್ಕೆ ಪಂಕಜರವರ ಆಸ್ತಿ, ದಕ್ಷಿಣಕ್ಕೆ ಪ್ರಸನ್ನಸಿಂಹರವರ ಆಸ್ತಿ ಇರುತ್ತದೆ. ನಾನು ಖರೀದಿಸಿರುವ ಆಸ್ತಿಯಲ್ಲಿ 1 ಎಕರೆ ಮೂರು ಮುಕ್ಕಾಲು ಗುಂಟೆ ಜಮೀನು ಹಾಗೂ ಖರಾಬು 18 ಗುಂಟೆ ಸೇರಿರುತ್ತದೆ. ನಾನು ಖರೀದಿಸಿರುವ ಆಸ್ತಿಯಲ್ಲಿ ಖರಾಬು ಜಮೀನಿನ ಪೂರ್ವ-ಪಶ್ಚಿಮ ಭಾಗದಲ್ಲಿ ಇರುತ್ತದೆ. ಖರಾಬು ಜಮೀನು ಕಲ್ಲಿನಿಂದ ಕೂಡಿರುತ್ತದೆ. ಸರ್ಕಾರಿ ಕೃಷಿ ಯೋಜನೆಯಲ್ಲಿ ನಾನು ಅನುದಾನ ಪಡೆದಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಮತ್ತು ನನ್ನ ತಂಗಿ 3 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯ ಜೊತೆ ಸೇರಿಕೊಂಡು ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ ದಾವಾ ಆಸ್ತಿಗೆ ನಾನು ಕಂದಾಯ ಪಾವತಿಸಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

ನನ್ನ ಗಂಡ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು ಈಗ ನಿವೃತ್ತಿಯಾಗಿರುತ್ತಾರೆ. ನಾನು 2 ಲಕ್ಷದ 20 ಸಾವಿರ ಕೊಟ್ಟು ನನ್ನ ಭಾಗದ ಸ್ವತ್ತನ್ನು ಖರೀದಿಸಿರುತ್ತೇನೆ. ನಾನು 2 ಲಕ್ಷದ 20 ಸಾವಿರ ಹಣವನ್ನು ನನ್ನ ಗಂಡನ ಜಮೀನಿನಿಂದ ಬಂದ ಆದಾಯ ಮತ್ತು ಚೀಟಿ ವ್ಯವಹಾರದಲ್ಲಿ ತೊಡಗಿಸಿದ್ದ ಹಣ ಹಾಗೂ ನಮ್ಮ ಉಳಿತಾಯದಿಂದ ಹೊಂದಿಸಿರುತ್ತೇವೆ. ನನ್ನ ಹಣದ ಮೂಲದ ಬಗ್ಗೆ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ಯಾವುದೇ ಹಣ ಕೊಡದೆ ಕ್ರಯ ಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯನ್ನು ಖರೀದಿಸುವ ಸಮಯಕ್ಕೆ ನನ್ನ ಬಳಿ ಅಷ್ಟು ಹಣ ಇತ್ತು ಎಂದು ತೋರಿಸುವ ಬಗ್ಗೆ ನನ್ನ ಗಂಡನನ್ನು ವಿಚಾರಣೆ ಮಾಡಿಸುತ್ತೇನೆ. 3 ನೇ ಪ್ರತಿವಾದಿಯು ಸಹ 2 ನೇ ಪ್ರತಿವಾದಿಗೆ ಯಾವುದೇ ಹಣ ಕೊಡದೆ ಕ್ರಯ ಪತ್ರ ಬರೆಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಇದು ಸುಳ್ಳಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

ಈ ದಾವೆಯ ಸಮನ್ಸ್ ಬಂದ ನಂತರ ಈ ದಾವೆ ದಾಖಲಾದ ಬಗ್ಗೆ 2 ನೇ ಪ್ರತಿವಾದಿಯನ್ನು ಕೇಳಿರುತ್ತೇನೆ. ಆಗ 2 ನೇ ಪ್ರತಿವಾದಿಯು ನಮಗೆ ತೊಂದರೆ ಕೊಡಲು ಈ ರೀತಿ ದಾವೆಯನ್ನು ಸಲ್ಲಿಸಿದ್ದಾರೆ ನಾವು ಪ್ರತಿವಾದ ಪತ್ರವನ್ನು ಸಲ್ಲಿಸೋಣ ಎಂದು ತಿಳಿಸಿದ್ದರು. ಈ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತೇನೆ . ಈ

ದಾವೆಯನ್ನು ದಾಖಲಿಸಿದ ನಂತರ ವಾದಿಗಳಿಗೆ ಕರಾರು ಆಗಿರುವ ವಿಚಾರ ನನಗೆ ತಿಳಿದಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸ. ಇದೆ.

3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನೆಲಮಂಗಲ.